ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ:-ಎಡಿಎಂ2(1)ರಾಷ್ಟ್ರ ಪ್ರಶಸ್ತಿ 01/2018-19 ದಿನಾಂಕ:-28-06-2018

## ಜ್ಞಾಪನ

ವಿಷಯ:-2017-18ನೇ ಸಾಲಿಗೆ ರಾಷ್ಟ್ರ ಪ್ರಶಸ್ತಿಗೆ ಉತ್ತಮ ಶಿಕ್ಷಕರನ್ನು ಆಯ್ಕೆ ಮಾಡುವ ಬಗ್ಗೆ.

ಉಲ್ಲೇಖ:-ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ನವದೆಹಲಿ ರವರ ಮಾರ್ಗಸೂಚಿ ದಿನಾಂಕ:-15-06-2018, 22-06-2018 ಮತ್ತು 27-06-2018.

*****

ತರಗತಿ ಕೋಣೆಯಲ್ಲಿ ವಿಷಯ ಪಾಂಡಿತ್ಯದ ಜೊತೆಗೆ ಪೂರಕ ಪರಿಕರಗಳೊಂದಿಗೆ ಬೋಧನಾ ಚಟುವಟಿಕೆಗಳನ್ನು ಸಾದರಪಡಿಸಿ ಮಕ್ಕಳಲ್ಲಿ ಶಾಶ್ವತ ಮತ್ತು ಸಂತಸದಾಯಕ ಕಲಿಕೆಯನ್ನುಂಟುಮಾಡುವ ಬಹುಮುಖ ವ್ಯಕ್ತಿತ್ವದ ಶಿಕ್ಷಕರನ್ನು ಗುರ್ತಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಕ್ಷಕ ಪ್ರಶಸ್ತಿಯನ್ನು ನೀಡುವುದರ ಮೂಲಕ ಗೌರವಿಸುತ್ತಿವೆ.

2017-18ನೇ ಸಾಲಿನ ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕರ ಆಯ್ಕೆಗೆ ಅರ್ಜಿ ಸಲ್ಲಿಸಲು ಆನ್ ಲೈನ್ ಮೂಲಕ ಅರ್ಜಿಯನ್ನು ಕರೆಯಲಾಗಿದೆ ಅರ್ಜಿ ಸಲ್ಲಿಕೆ ಹಾಗೂ ಆಯ್ಕೆ ಪ್ರಕ್ರಿಯೆ ಬಗ್ಗೆ ಈ ಕೆಳಗಿನಂತೆ ವಿವರಿಸಲಾಗಿದೆ.

- ಅರ್ಜಿ ಸಲ್ಲಿಸಲು ವೆಬ್‌ಸೈಟ್ www.mhrd.gov.in ನಲ್ಲಿ http://www.nationalawardtoteachers.com/short_Signup.html ಲಿಂಕ್ ಸಂಪರ್ಕಿಸುವುದು.
- Web Portal ಮತ್ತು Mobile app ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.
- ಆಸಕ್ತ ಶಿಕ್ಷಕರು MHRD ವತಿಯಿಂದ ನೀಡಿರುವ ವೆಬ್ ಪೋರ್ಟಲ್‌ನಲ್ಲಿ ಆನ್ ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15-07-2018.
- ಅರ್ಜಿಯೊಂದಿಗೆ ಶಿಕ್ಷಕರು ಪೂರಕ ದಾಖಲೆಗಳನ್ನು, ವರದಿಗಳನ್ನು, ಚಟುವಟಿಕೆಗಳ ಪಟ್ಟಿ, ಕ್ಷೇತ್ರ ಭೇಟಿ, ಛಾಯಾಚಿತ್ರ, ಆಡಿಯೋ ಮತ್ತು ವೀಡಿಯೋಗಳನ್ನು ಸಲ್ಲಿಸಬಹುದಾಗಿದೆ.
- ಅರ್ಜಿ ಸಲ್ಲಿಸಲು ಇಚ್ಛಿಸುವ ಶಿಕ್ಷಕರು ತಾವು ಸಲ್ಲಿಸಿದ ಮಾಹಿತಿ / ದತ್ತಾಂಶ ಸತ್ಯವಾಗಿರುವುದೆಂದು ಮುಚ್ಚಳಿಕೆ ನೀಡಬೇಕು.
- ಅರ್ಜಿ ಸಲ್ಲಿಸಲು ಬೋಧನಾ ಅನುಭವದ ಕನಿಷ್ಠ ವರ್ಷಗಳ ಮಿತಿ ಇರುವುದಿಲ್ಲ.

## ಜಿಲ್ಲಾ ಆಯ್ಕೆ ಸಮಿತಿ: (ಡಿ.ಎಸ್.ಸಿ)

- ಸಿ.ಇ.ಓ, ಜಿಲ್ಲಾ ಪಂಚಾಯಿತಿ – ಅಧ್ಯಕ್ಷರು.
- ಕೇಂದ್ರ ಸರ್ಕಾರದ ಪ್ರತಿನಿಧಿ– ಸಿಬಿಎಸ್‌ಇ ಅಧಿಕಾರಿಗಳು / ಕೇಂದ್ರೀಯ ವಿದ್ಯಾಲಯದ ಅಧಿಕಾರಿಗಳು / ನವೋದಯ ವಿದ್ಯಾಲಯದ ಪ್ರಾಂಶುಪಾಲರು ಅಥವಾ ಅಧಿಕಾರಿಗಳು – ಸದಸ್ಯರು.
- ಜಿಲ್ಲಾ ಉಪ ನಿರ್ದೇಶಕರುಗಳು –ಸದಸ್ಯ ಕಾರ್ಯದರ್ಶಿ.
- ಜಿಲ್ಲಾಧಿಕಾರಿಗಳು / ಸಿ.ಇ.ಓ ರವರಿಂದ ನಾಮ ನಿರ್ದೇಶಿಸಲ್ಪಟ್ಟ ಶಿಕ್ಷಣ ತಜ್ಞರು – ಸದಸ್ಯರು.

## ಜಿಲ್ಲಾ ಆಯ್ಕೆ ಸಮಿತಿಯ ಕಾರ್ಯಗಳು:

- ಜಿಲ್ಲಾ ಮಟ್ಟದಲ್ಲಿ ಪರಿಶೀಲನಾ ತಂಡಗಳನ್ನು ರಚಿಸಿ, ಪ್ರಶಸ್ತಿ ಆಯ್ಕೆ ಬಯಸಿದ ಶಿಕ್ಷಕರು ಅರ್ಜಿಯಲ್ಲಿ ಸಲ್ಲಿಸಿದ ಮಾಹಿತಿಯನ್ನು ಭೌತಿಕವಾಗಿ ಪರಿಶೀಲಿಸುವುದು.
- ಪರಿಶೀಲಿಸಿದ ನಂತರ ಮೌಲ್ಯಮಾಪನ / ಅಂಕಗಳನ್ನು ನೀಡಿ ವರದಿಯನ್ನು ತಂಡಗಳು ಡಿ.ಎಸ್.ಸಿ ಗೆ ನೀಡುವುದು.
- ಡಿ.ಎಸ್.ಸಿ ಯು ಪ್ರತಿ ಅರ್ಜಿದಾರರಿಗೆ ನೀಡಿದ ಅಂಕಗಳನ್ನು ಪರಿಶೀಲಿಸಿ ದೃಢೀಕರಣ ಪತ್ರವನ್ನು ನೀಡುವುದು.
- ಡಿ.ಎಸ್.ಸಿ ಯು ವಿವರವಾದ ಮೌಲ್ಯಮಾಪನದೊಂದಿಗೆ 3 ಶಿಕ್ಷಕರ ಪ್ರಸ್ತಾವನೆಯನ್ನು ಆಯ್ಕೆ ಮಾಡಿ ರಾಜ್ಯ ಹಂತಕ್ಕೆ ದಿನಾಂಕ: 24-07-2018ರೊಳಗಾಗಿ ಆನ್‌ಲೈನ್ ಮೂಲಕ ಕಳುಹಿಸುವುದು.
- ಪ್ರತಿ ಶಿಕ್ಷಕರ vigilance clearance certificate ನೊಂದಿಗೆ ಆಯ್ಕೆ ಪಟ್ಟಿ ಕಳುಹಿಸುವುದು.
- ಡಿ.ಎಸ್.ಸಿ ಯು ವಿಶೇಷ ಸಂದರ್ಭದಲ್ಲಿ ಅಸಾಧಾರಣ ಸೇವೆ ಸಲ್ಲಿಸಿದ ಒಬ್ಬ ವಿಶೇಷ ಶಿಕ್ಷಕರನ್ನು / ಶಾಲಾ ಮುಖ್ಯಸ್ಥರನ್ನು ಆಯ್ಕೆ ಮಾಡಬಹುದು.
- ಡಿ.ಎಸ್.ಸಿ ಯು ಆಯ್ಕೆ ಮಾಡುವಾಗ ವಿಜ್ಞಾನ, ಕಲೆ, ಸಂಗೀತ, ದೈಹಿಕ ಶಿಕ್ಷಣ ಇತ್ಯಾದಿ ವಿಷಯಗಳ ಶಿಕ್ಷಕರನ್ನು ಪರಿಗಣಿಸಬಹುದು.

## ರಾಜ್ಯ ಮಟ್ಟದ ಆಯ್ಕೆ ಸಮಿತಿ (SSC):-

- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) – ಅಧ್ಯಕ್ಷರು
- ಕೇಂದ್ರ ಸರ್ಕಾರದಿಂದ ನಾಮ ನಿರ್ದೇಶಿತರು – ಸದಸ್ಯರು.
- ಆಯುಕ್ತರು, ಸಾ.ಶಿ.ಇಲಾಖೆ / ನಿರ್ದೇಶಕರು – ಸದಸ್ಯ ಕಾರ್ಯದರ್ಶಿ.
- ನಿರ್ದೇಶಕರು, ಡಿ.ಎಸ್.ಇ.ಆರ್.ಟಿ – ಸದಸ್ಯರು.

## ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಅರ್ಹ ಶಿಕ್ಷಕರು:-

- ಈ ಕೆಳಕಂಡ ವರ್ಗಗಳ ರಾಜ್ಯ ಸರ್ಕಾರಿ, ಸ್ಥಳೀಯ ಸಂಸ್ಥೆಗಳು, ಅನುದಾನಿತ ಪ್ರಾಥಮಿಕ / ಪ್ರೌಢ /ಹೈಯರ್ ಸೆಕೆಂಡರಿ ಶಾಲೆಗಳ ಶಿಕ್ಷಕರು / ಮುಖ್ಯ ಶಿಕ್ಷಕರು.
- ಕೇಂದ್ರೀಯ ವಿದ್ಯಾಲಯ, ಜವಾಹರ್ ನವೋದಯ ವಿದ್ಯಾಲಯ, ಟಿಬೆಟಿಯನ್ನರ ಕೇಂದ್ರೀಯ ಶಾಲೆ, ಸೈನಿಕ ಶಾಲೆಗಳು.
- ರಾಜ್ಯ ಸರ್ಕಾರದಿಂದ ಸಿ.ಬಿ.ಎಸ್.ಸಿ ಶಾಲೆಗಲ ಶಿಕ್ಷಕರು/ ಮುಖ್ಯ ಶಿಕ್ಷಕರ ಪ್ರಸ್ತಾವನೆಗಳನ್ನು ನಾಮ ನಿರ್ದೇಶನ ಮಾಡಬೇಕಾಗಿಲ್ಲ.
- ದಿನಾಂಕ: 30.04.2017ರೊಳಗಾಗಿ ಕನಿಷ್ಠ 4 ತಿಂಗಳು ಪಾಠ ಮಾಡಿ ನಿವೃತ್ತರಾದ ಅರ್ಹ ಶಿಕ್ಷಕರು.
- ಶೈಕ್ಷಣಿಕ ಆಡಳಿತಗಾರರು, ಇನ್ಸ್‌ಪೆಕ್ಟರ್‌ಗಳು ಮತ್ತು ತರಬೇತಿ ಸಂಸ್ಥೆಯ ಸಿಬ್ಬಂದಿಯವರು ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಟ್ಯೂಷನ್‌ನಲ್ಲಿ ತೊಡಗಿರದ ಶಿಕ್ಷಕರು / ಮುಖ್ಯ ಶಿಕ್ಷಕರು ಅರ್ಹರಲ್ಲ.
- ರೆಗ್ಯುಲರ್ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ಮಾತ್ರ ಅರ್ಹರು.
- ಗುತ್ತಿಗೆ ಶಿಕ್ಷಕರು ಮತ್ತು ಶಿಕ್ಷಾ ಮಿತ್ರ ಶಿಕ್ಷಕರು ಅರ್ಜಿ ಸಲ್ಲಿಸಲು ಅರ್ಹರಲ್ಲ.

## ರಾಜ್ಯ ಆಯ್ಕೆ ಸಮಿತಿಯ ಮುಖ್ಯ ಕರ್ತವ್ಯಗಳು :(ಎಸ್.ಎಸ್.ಸಿ)

1. ಜಿಲ್ಲಾ ಆಯ್ಕೆ ಸಮಿತಿಯಿಂದ ಪಡೆದ ಪ್ರಸ್ತಾವನೆಗಳನ್ನು ಪುನರ್ ಪರಿಶೀಲಿಸಲಾಗುವುದು.
2. ರಾಜ್ಯಕ್ಕೆ ನಿಗಧಿಪಡಿಸಿರುವ ಸಂಖ್ಯೆಗೆ ಅನುಗುಣವಾಗಿ ಆಯ್ಕೆ ಪಟ್ಟಿಯನ್ನು ತಯಾರಿಸಿ, Online Portal ನಲ್ಲಿ ರಾಷ್ಟ್ರ ಮಟ್ಟದಲ್ಲಿನ Independent jury ಗೆ ಸಲ್ಲಿಸಲಾಗುವುದು.

## ಸಂಘಟನಾ ಆಯ್ಕೆ ಸಮಿತಿ (ಇತರೆ ಸಂಘಟನೆಗಳು)

**(Organization Selection committee) (OSC):-**

1. ಆಯುಕ್ತರು / ನಿರ್ದೇಶಕರು :-ಅಧ್ಯಕ್ಷರು
2. ಆಯುಕ್ತರಿಂದ ನಾಮನಿರ್ದೇಶಿಸಲ್ಪಟ್ಟ ಅಧಿಕಾರಿಗಳು :-ಸದಸ್ಯರು
3. ಕೇಂದ್ರ ಸರ್ಕಾರದಿಂದ ನಾಮ ನಿರ್ದೇಶಿತರು :-ಸದಸ್ಯರು
4. ಅಧ್ಯಕ್ಷರಿಂದ ನಿಯೋಜಿತ ಶಿಕ್ಷಣ ತಜ್ಞರು :-ಸದಸ್ಯರು

## ಸಂಘಟನಾ ಆಯ್ಕೆ ಸಮಿತಿಯ ಮುಖ್ಯ ಕಾರ್ಯಗಳು(OSC):-

1. ಸಂಘಟನೆರವರು ಅವರ ಆಂತರಿಕ ಪ್ರಕ್ರಿಯೆಯಿಂದ ಪ್ರಸ್ತಾವನೆಗಳನ್ನು ಅನುಪಾಲನೆ ಮಾಡಬಹುದು.
2. ಎಲ್ಲಾ ಪ್ರಸ್ತಾವನೆಗಳನ್ನು ಮೌಲ್ಯಮಾಪನ ಮಾಡಿ ಗರಿಷ್ಠ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ಪ್ರಸ್ತಾವನೆಯನ್ನು ರಾಷ್ಟ್ರ ಮಟ್ಟದ Independent jury ಗೆ Online Portal ಮುಖಾಂತರ ಸಲ್ಲಿಸಲಾಗುತ್ತದೆ.

## ರಾಷ್ಟ್ರ ಮಟ್ಟದ Independent jury ಯ ಸಮಿತಿ:-

1. ರಾಷ್ಟ್ರ ಮಟ್ಟದಲಿ ನಿವೃತ್ತ ಕಾರ್ಯದರ್ಶಿಗಳು, Department of School Education and literacy, MHRD ಇವರ ಅಧ್ಯಕ್ಷತೆಯಲ್ಲಿ ಸ್ವತಂತ್ರ jury ರವರು 36 ರಾಜ್ಯ ಹಾಗೂ 7 ಕೇಂದ್ರೀಕೃತ ರಾಜ್ಯಗಳಿಂದ ಪಡೆಯಲಾದ ಪ್ರಸ್ತಾವನೆಗಳನ್ನು ಪುನರ್ ಪರಿಶೀಲನೆ ನಡೆಸಲಾಗುತ್ತದೆ.

   **a).ಪ್ರತಿ ಒಬ್ಬ ಆಯ್ಕೆಗೊಂಡ ಪ್ರತಿನಿಧಿಗಳು** juryಯ ಸಮ್ಮುಖದಲ್ಲಿ ಮಂಡನೆಯನ್ನು ಮಾಡತಕ್ಕದ್ದು.

   **b)** Jury ರವರು ಗರಿಷ್ಠ 45 (+2 ವಿಶೇಷ ಶಿಕ್ಷಕರು)ಪ್ರಸ್ತಾವನೆಗಳನ್ನು ಆಯ್ಕೆ ಮಾಡುವರು.

   **c)** Nominee ರವರಿಗೆ, MHRD ವತಿಯಿಂದ TA/DA ನೀಲಾಗುತ್ತದೆ.

   **d)**NCERT ವತಿಯಿಂದ Jury ರವರಿಗೆ ಎಲ್ಲಾ ರೀತಿಯ ಸಹಕಾರವನ್ನು ಒದಗಿಸಲಾಗುವುದು.

## ಎಲ್ಲಾ ಪ್ರಶಸ್ತಿಗಳು ಈ ಪ್ರಶಸ್ತಿಯೊಂದಿಗೆ ಸೇರಿರುತ್ತದೆ. (All the other awards have been subsumed under this award)

## ಕಾಲಮಿತಿ:-

1. Web Portal ಅರ್ಜಿ ಸಲ್ಲಿಕೆಗಾಗಿ ದಿನಾಂಕ:- 15-06-2018 ರಿಂದ 15-07-2018ರ ವರೆಗೆ ತೆರೆದಿರುತ್ತದೆ. ಇದಕ್ಕಾಗಿ ಹೆಚ್ಚಿನ ಪ್ರಚಾರವನ್ನು ದಿನಪತ್ರಿಕೆ, Social Media, Advertisement (Twitter, Face book etc) ಹಾಗೂ ಶಿಕ್ಷಕರಿಗೆ ನೇರವಾಗಿ

ಇ-ಮೇಲ್ ಮುಖಾಂತರ ಜಿಲ್ಲಾ ಹಂತದಲ್ಲಿ ಸಮೂಹ ಮಾಧ್ಯಮದ ಮೂಲಕ ಪ್ರಚಾರ ನೀಡಬೇಕು.

a. ದಿನಾಂಕ:-24-07-2018ರ ಒಳಗಾಗಿ ಜಿಲ್ಲಾ ಆಯ್ಕೆ ಸಮಿತಿಯು **Nominee** ರವರ ಪಟ್ಟಿಯನ್ನು ರಾಜ್ಯಕ್ಕೆ ಸಲ್ಲಿಸತಕ್ಕದ್ದು.

b. ರಾಜ್ಯ ಆಯ್ಕೆ ಸಮಿತಿಯು ದಿನಾಂಕ:-31-07-2018 ರಂದು ರಾಜ್ಯ ಮಟ್ಟದಲ್ಲಿ ಆಯ್ಕೆಯಾದ ಶಿಕ್ಷಕರ ಪ್ರಸ್ತಾವನೆಯನ್ನು Web Portal ಮುಖಾಂತರ ರಾಷ್ಟ್ರ ಮಟ್ಟದ Independent jury ಗೆ ಸಲ್ಲಿಸತಕ್ಕದ್ದು.

c. Nominee ರವರಿಗೆ , MHRD ವತಿಯಿಂದ ನೇರ ಪತ್ರ ವ್ಯವಹಾರ ಹಾಗೂ ಸಂಪರ್ಕವನ್ನು ದಿನಾಂಕ:-03-08-2018 ರೊಳಗಾಗಿ ಮಾಡಲಾಗುತ್ತದೆ.

d. ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ:-30-08-2018 ರಂದು Independent jury ವತಿಯಿಂದ ಪ್ರಕಟಿಸಲಾಗುತ್ತದೆ.

## ಶಿಕ್ಷಕರ ಆಯ್ಕೆ ವಿಧಾನದಲ್ಲಿ ವಿವಿಧ ಹಂತಗಳ ಮಾರ್ಗದರ್ಶಿಗಳು:

ಶಿಕ್ಷಕರ ಮೌಲ್ಯಮಾಪನವು Evaluation Matrix ನ ಮಾನದಂಡಗಳಿಗೆ ಆಧಾರಿತವಾಗಿರುತ್ತದೆ. ಇದರಲ್ಲಿ ಎರಡು ವಿಧದ ಮಾನದಂಡಗಳಿವೆ.

### 1. ವಸ್ತುನಿಷ್ಠ ಮಾನದಂಡಗಳು:

ಇದರ ಪ್ರಕಾರ ಶಿಕ್ಷಕರ ಆಯ್ಕೆಗೆ ಸಂಬಂಧಿಸಿದ ಮಾನದಂಡಗಳಿಗೆ ಅನುಗುಣವಾಗಿ ಅಂಕಗಳನ್ನು ನೀಡಲಾಗುವುದುಇದಕ್ಕೆ 100 ರಲ್ಲಿ20 ಅಂಕಗಳನ್ನು ನಿಗಧಿಪಡಿಸಲಾಗಿದೆ.

### 2. ಕಾರ್ಯನಿರ್ವಹಣಾ ಆಧಾರಿತ ಮಾನದಂಡಗಳು:

ಇದರಲ್ಲಿ ಶಿಕ್ಷಕರ ಕಾರ್ಯನಿರ್ವಾಹಣಾಧಾರಿತವಾಗಿ ಅಂಕಗಳನ್ನು ನೀಡಲಾಗಿರುತ್ತದೆ. ಉದಾ. ಕಲಿಕಾ ಫಲಾಶೃತಿಯ ಅಭಿವೃದ್ಧಿ, ಕೈಗೊಂಡ ನಾವಿನ್ಯಯುತ ಪ್ರಯೋಗಗಳು, ಪಠ್ಯ ಮತ್ತು ಸಹ ಪಠ್ಯ ಚಟುವಟಿಕೆಗಳ ಸಂಘಟನೆ, ಕಲಿಕೋಪಕರಣಗಳ ಬಳಕೆ, ಸಾಮಾಜಿಕವಾಗಿ ತೊಡಗಿಸಿಕೊಳ್ಳುವಿಕೆ, ಅನುಭವಿಕ ಕಲಿಕೆ , ಮಕ್ಕಳಲ್ಲಿ ದೈಹಿಕ ಶಿಕ್ಷಣವನ್ನು ಉತ್ತಮ ಪಡಿಸಲು ಕೈ ಗೊಂಡ ವಿಶಿಷ್ಠ ವಿಧಾನಗಳ ಅಳವಡಿಕೆ ಇತ್ಯಾದಿ.ಇದಕ್ಕೆ 100 ರಲ್ಲಿ 80 ಅಂಕಗಳನ್ನು ನಿಗಧಿ ಪಡಿಸಿದೆ.

## ವಸ್ತು ನಿಷ್ಠ ಮಾನದಂಡಗಳು:

| ಕ್ರ ಸಂ | ಮಾನದಂಡಗಳು |
|---|---|
| 1 | ಶಾಲೆಯ ಭೌತಿಕ ಸೌಲಭ್ಯಗಳು,ಗಣಕಯಂತ್ರ, ಮಧ್ಯಹ್ನದ ಬಿಸಿ ಊಟ, ಶಾಲಾ ನಿಧಿ, ಪುಸ್ತಕಗಳು ಇತ್ಯದಿಗಳನ್ನು ಶಾಲೆಗಾಗಿ ಧೇಣಿಗೆ ಪಡೆದು ಶಿಕ್ಷಕರು ಸಮುದಾಯ ಹಾಗೂ ಪೋಷಕರಿಗೆ ಪ್ರೇರಣೆ ನೀಡಲು ಮಾಡಿದ ಕಾರ್ಯದ ವಿವರ. |
| 2 | ಕಳೆದ ಐದು ವರ್ಷಗಳಲ್ಲಿ ರಾಷ್ಟ್ರ ಮತ್ತು ಅಂತ್ರರಾಷ್ಟ್ರ ಮಟ್ಟದಲ್ಲಿ ಪ್ರಕಟಿಸಿದ ಸಂಶೋಧನ, ಪ್ರಬಂಧ, ಲೇಖನ, ಪುಸ್ತಕಗಳ ವಿವರ. |
| 3 | ಕಳೆದ ಮೂರು ವರ್ಷಗಳ ಕಾರ್ಯ ನಿರ್ವಾಹಣ ವರದಿ. |
| 4 | ಯಾವುದೇ ದೂರು ಇಲ್ಲದೆ ಶಿಕ್ಷಕರು ನಿಯಮಿತವಾಗಿ ಶಾಲೆಗೆ ಹಾಜರಾಗುತ್ತಿದ್ದಾರೆಯೆ ಎಂಬುದನ್ನು ದೃಢೀಕರಿಸಿಕೊಳ್ಳುವುದು. |
| 5 | ನಿಯೊಜಿಸಲ್ಪಟ್ಟ ಸೇವಾ ನಿರತ ತರಬೇತಿಗಳಿಗೆ ಶಿಕ್ಷಕರು ನಿಯಮಿತವಾಗಿ ಹಾಜರಾಗುತ್ತಿದ್ದಾರೆಯೆ ಎಂಬುದನ್ನು ದೃಢೀಕರಿಸಿಕೊಳ್ಳುವುದು. |
| 6 | ಮಕ್ಕಳು ಶಾಲೆ ಬಿಡುವುದನ್ನು ಕಡಿಮೆ ಮಾಡಲು ಹಾಗೂ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲು ಶಿಕ್ಷಕರು ಕೈಗೊಂಡ ಕ್ರಮಗಳು. |
| 7 | ಸ್ವಯಂ ಅಥವ ಮೂಕ್ಸ್ ಕೂರ್ಸ್‌ಗೆ ಶಿಕ್ಷಕರು ದಾಖಲಾತಿಯನ್ನು ಪಡೆದಿರುತ್ತಾರೆಯೆ ಎಂಬುದನ್ನು ದೃಢೀಕರಿಸಿಕೊಳ್ಳುವುದು. |
| 8 | ಡಿ.ಎಸ್.ಸಿ,ಇ.ಆರ್./ ಬೋರ್ಡ್ ಅಥವಾ ಎನ್.ಸಿ.ಇ.ಆರ್.ಟಿಗೆ ಇ-ಕಂಟೆಂಟ್, ಪಠ್ಯಪುಸ್ತಕ , ಶಿಕ್ಷಕರ ಕೈಪಿಡಿಗಳನ್ನು ಅಭಿವೃದ್ಧಿ ಪಡಿಸಲು ಸಹಕರಿಸಿದ ಬಗ್ಗೆ ದೃಢೀಕರಣ. |

ಭಾಗ-ಬಿ

ಕಾರ್ಯಕ್ಷಮತೆ ಆಧಾರಿತ ಮಾನದಂಡಗಳು:( ಸೂಚನಾತ್ಮಕ ಮತ್ತು ನಿದರ್ಶನಾತ್ಮಕ)

| ಕ್ರ ಸಂ | ಮಾನದಂಡಗಳು |
|---|---|
| 1 | ಶಿಕ್ಷಕರು ತಮ್ಮ ಬೋಧನೆಯಲ್ಲಿ ಅತೀ ಹೆಚ್ಚು ಪ್ರಭಾವ ಬೀರಲು ಕೈಗೊಂಡ ನಾವಿನ್ಯಯುತ ಪ್ರಯೋಗಗಳು (ಉದಾ. ಐ.ಸಿ.ಟಿಯ ಬಳಕೆ, ಸಂತಸದಾಕ ಕಲಿಕೆಯ ತಂತ್ರಗಳು) ಬೋಧನಾ ವಿಧಾನಗಳನ್ನು ಅಭಿವೃದ್ಧಿ ಪಡಿಸಿರುವುದು ಮತ್ತು ಪ್ರಚೂರ ಪಡಿಸಿರುವುದು. ತಮ್ಮ ದೈನಂದಿನ ಭೋಧನಾ ಪ್ರಕ್ರಿಯೆಯಲ್ಲಿ ಸೂಕ್ತ ಭೋಧನಾ ವಿಧಾನಗಳನ್ನು ಅಭಿವೃದ್ಧಿ ಪಡಿಸಿರುವುದು. |
| 2 | ಭೋಧನಾ ಕಲಿಕಾ ಸಾಮಗ್ರಿಗಳನ್ನು ಕಡಿಮೆ ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವುದು ( ನಾವಿನ್ಯ ಪ್ರಯೋಗಗಳ ಫಲಶೃತಿ , ಸಂಖ್ಯೆ ಮತ್ತು ಶ್ರೇಣಿ ಆಧಾರಿತವಾಗಿ) |
| 3 | ಅ). ಮಕ್ಕಳಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಸುವುದು, ಹಾಗೂ ಶಾಲಾ ಭೌತಿಕ ಸೌಲಭ್ಯಗಳನ್ನು ಉತ್ತಮ ಪಡಿಸಲು ಸಮುದಾಯವನ್ನು ತೊಡಗಿಸಿಕೊಂಡಿರುವುದು.<br>ಆ). ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು ಪ್ರೇರೆಪಿಸಲು ಕೈಗೊಂಡ ಕ್ರಮಗಳು |

ಆಯುಕ್ತರು,
ಸಾ.ಶಿ.ಇಲಾಖೆ,ಬೆಂಗಳೂರು

**ಇವರಿಗೆ,**

1. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ)ಇವರಿಗೆ.
2. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ.
3. ನಿರ್ದೇಶಕರು , ಡಿ.ಎಸ್.ಇ.ಆರ್.ಟಿ., ಬೆಂಗಳೂರು.
4. ಸಹ ನಿರ್ದೇಶಕರು, ಟಿ.ಬಿ.ಎಫ್. ಮತ್ತು ಎಸ್.ಡಬ್ಲ್ಯೂ.ಎಫ್. ಶಿಕ್ಷಕರ ಸದನ ಬೆಂಗಳೂರು.
5. ಸಾರ್ವಜನಿಕ ಶಿಕ್ಷಣ ಇಲಾಖೆ, ವೆಬ್ ಸೈಟ್‌ನಲ್ಲಿ ಸೇರ್ಪಡೆಗಾಗಿ.
6. ಕಛೇರಿ ಪ್ರತಿ.